ಆ) ಪ್ರಶ್ನಿತ ಜಮೀನನ್ನು ಕ್ರಯಕ್ಕೆ ಪಡೆದಿರುವ ಕುರಿತು ಸರ್ಕಾರದ ಪೂರ್ವಾನುಮತಿ ಪಡೆದಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರಶ್ನಿತ ಜಮೀನನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಸಾಧಕ–ಬಾಧಕಗಳನ್ನು ಪರಿಶೀಲಿಸಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಹಲವು ಜಮೀನುಗಳ ಪರಭಾರೆ ನಿಷೇಧ) ಕಾಯಿದೆ 1978ರ ಕಲಂ 4(2) ರಡಿಯಲ್ಲಿ ವಿಚಾರಣೆ ನಡೆಸಿ ಕ್ರಮ ತೆಗೆದುಕೊಳ್ಳುವ ಅಧಿಕಾರ ಉಪವಿಭಾಗಾಧಿಕಾರಿಗಳ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಇ) ವಿಚಾರಣೆ ನಡೆಸುವ ಪ್ರಾಧಿಕಾರ ಉಪವಿಭಾಗಾಧಿಕಾರಿಗಳು, ರಾಮನಗರ ಉಪವಿಭಾಗ, ರಾಮನಗರ ರವರು ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ.

ಏತ ನೀರಾವರಿ ಯೋಜನೆಗಳು

2027(1213); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ರಾಜ್ಯದಲ್ಲಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಎಷ್ಟು ಜಾರಿಯಲ್ಲಿವೆ ಹಾಗೂ ಎಷ್ಟು ಸ್ಥಗಿತಗೊಂಡಿವೆ (ಜಿಲ್ಲಾವಾರು ವಿವರ ಒದಗಿಸುವುದು)

ಇ) ಸ್ಥಗಿತಗೊಂಡಿರುವ ಏತ ನೀರಾವರಿ ಯೋಜನೆಗಳನ್ನು ಪುನಃ ಪ್ರಾರಂಭಿಸುವ ಯೋಚನೆ ಸರ್ಕಾರಕ್ಕಿದೆಯೇ?

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ರಾಜ್ಯದಲ್ಲಿರುವ ಏತ ನೀರಾವರಿ ಯೋಜನೆಗಳ ಒಟ್ಟು ಸಂಖ್ಯೆ 138.

ಆ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಸ್ಥಗಿತಗೊಂಡಿರುವ ಏತ ನೀರಾವರಿ ಯೋಜನೆಗಳನ್ನು ಪುನಃ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1213ಕ್ಕೆ ಅನುಬಂಧ

ಕ್ರ ಸಂ.	ಜಿಲ್ಲೆ	ಜಾರಿಯಲ್ಲಿರುವುದು	ಪ್ರಗತಿಯಲ್ಲಿರುವುದು/ ಪ್ರಾರಂಭಿಸಬೇಕಾಗಿರುವುದು	ಸ್ಥಗಿತಗೊಂಡಿರುವುದು
1	ಶಿವಮೊಗ್ಗ	1	–	–
2	ಗುಲ್ಬರ್ಗ	3	–	–
3	ಬೀದರ್	1	–	–
4	ಬಾಗಲಕೋಟೆ	15	–	–
5	ಬೆಳಗಾವಿ	23	–	–
6	ಉಡುಪಿ	2	–	–
7	ರಾಯಚೂರು	5	–	–
8	ಕೊಪ್ಪಳ	4	–	–
9	ಬಳ್ಳಾರಿ	6	–	–
10	ಗದಗ	2	–	–
11	ಬಿಜಾಪುರ	8	–	–
12	ಯಾದಗಿರಿ	4	–	–
13	ಮಂಡ್ಯ	23	10	8
14	ರಾಮನಗರ	6	–	–
15	ಮೈಸೂರು	7	–	2
16	ಚಾಮರಾಜನಗರ	6	–	1
17	ಹಾಸನ	9	11	4
18	ಕೊಡಗು	1	–	–
19	ಚಿಕ್ಕಮಗಳೂರು	–	1	–

ಟಿಪ್ಪಣಿ: ಕೆಲವು ಏತ ನೀರಾವರಿ ಯೋಜನೆಗಳು 2 ಅಥವಾ 3 ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುತ್ತಿದ್ದು, ಆಯಾಯಾ ಜಿಲ್ಲೆಗಳ ವ್ಯಾಪ್ತಿಗೆ ಬರುವ ಏತ ನೀರಾವರಿ ಯೋಜನೆಗಳ ಸಂಖ್ಯೆಗಳನ್ನು ನಮೂದಿಸಲಾಗಿದೆ. ಆದುದರಿಂದ ಮೇಲೆ ಸೂಚಿಸಿರುವ ಒಟ್ಟು ಸಂಖ್ಯೆಯಲ್ಲಿ ಹೆಚ್ಚಳವಿರುತ್ತದೆ.